ಇದ್ದ ಮಹತ್ವದ ಅಂಶಗಳಲ್ಲಿ - ಉಪ್ಪಿನ ಮೇಲೆ ತೆರಿಗೆ ವಿಧಿಸುವುದು, ಮದ್ಯಪಾನ ನಿಷೇಧವನ್ನು ರದ್ದುಪಡಿಸುವುದು, ವಿಮಾ ಕಂಪನಿಗಳ ರಾಷ್ಟ್ರೀಕರಣವನ್ನು ರದ್ದುಪಡಿಸುವುದು ಮತ್ತು ವಿದೇಶಿ ನೀತಿಯಲ್ಲಿ ಮೂಲಭೂತ ಬದಲಾವಣೆಗಳನ್ನು ಪ್ರತಿಪಾದಿಸಿತ್ತು. ಅದರಲ್ಲಿದ್ದ ಅತ್ಯಂತ ವಿವಾದಾತ್ಮಕ ವಿಷಯ ಕಾಶ್ಮೀರಕ್ಕೆ ಸಂಬಂಧಿಸಿದ್ದು. ಅದರಲ್ಲಿ ಎರಡು ಮಹತ್ವದ ವಿಷಯಗಳನ್ನು ಅಂಬೇಡ್ಕರ್ ಪ್ರಸ್ತಾಪಿಸಿದ್ದರು (ಪುಟ 426). ಮೊದಲನೆಯ ವಿಷಯ, ಭಾರತ ವಿಭಜನೆಯನ್ನು ಅಂತಿಮ ನಿಲುವೆಂದು ಪರಿಗಣಿಸಿ ಮತ್ತೆ ಏಕೀಕರಣದ ಮಾತಾಡಬಾರದು ಎನ್ನುವುದು, ಮತ್ತು ಎರಡನೆಯದು, ಕಾಶ್ಮೀರವನ್ನು ಎರಡು ಭಾಗಗಳಾಗಿ ವಿಭಜಿಸಿ ಮುಸ್ಲಿಂ ಬಹುಸಂಖ್ಯೆಯಿರುವ ಭಾಗವನ್ನು ಪಾಕಿಸ್ತಾನಕ್ಕೆ ಕೊಟ್ಟು ಜಮ್ಮು ಮತ್ತು ಲಡಾಕ್ ಪ್ರಾಂತಗಳನ್ನು ಭಾರತದಲ್ಲಿ ಉಳಿಸಿಕೊಳ್ಳಬೇಕು ಎನ್ನುವ ಪ್ರಸ್ತಾಪ. ಭಾರತ ಮತ್ತು ಪಾಕಿಸ್ತಾನದ ಜನರ ನಡುವಿನ ಸಾಮರಸ್ಯಕ್ಕೆ ಇದು ಅತ್ಯಂತ ಅವಶ್ಯಕ ಎಂದು ಅಂಬೇಡ್ಕರ್ ವಾದಿಸಿದ್ದರಂತೆ.

ಯಾರನ್ನೂ ಆರಾಧಿಸುವ ಸ್ಥಾನದಲ್ಲಿಡದ, ತಮ್ಮ ಕಾಲದಲ್ಲಿ ಸಾಕಷ್ಟು ವಿವಾದಾಸ್ಪದ ನಿಲುವುಗಳನ್ನು ಕೈಗೊಂಡ, ಅನೇಕ ವಿರೋಧಾಭಾಸಗಳಿಂದ ಕೂಡಿದ ಪ್ರಖರ ಬುದ್ಧಿಜೀವಿಯೊಬ್ಬರ ವಿಚಾರಗಳ ಜೊತೆ ನಾವು ಸಂವಾದ ನಡೆಸುವುದನ್ನು ಕಳೆದುಕೊಳ್ಳುತ್ತಿದ್ದೇವೆಯೇ? ಅಂಬೇಡ್ಕರ್ ಅವರನ್ನು ಪ್ರಾತಃಸ್ಮರಣೀಯರ ಶ್ರೇಣಿಗೆ ಸೇರಿಸಿ, ಅವರ ಪ್ರತಿಮೆಗಳನ್ನು ಎಲ್ಲ ಮೂಲೆಗಳಲ್ಲೂ ಸ್ಥಾಪಿಸಿ, ಸಂವಿಧಾನದ ಕರ್ತೃವನ್ನಾಗಿ ಚಿತ್ರಿಸಿ, ಅವರು ಹೇಳಿದ ಅನೇಕ ಮಾತುಗಳನ್ನು ಅಂತಿಮ ಸತ್ಯದಂತೆ ಪರಿಗಣಿಸಿ ಭಕ್ತಿಮಾರ್ಗದಲ್ಲಿ ಸಾಗುತ್ತಿರುವ ಈ ಸಮಯಕ್ಕೆ ತೇಲ್ತುಂಬ್ಡೆ ನಮ್ಮನ್ನು ಎಚ್ಚರಿಸುತ್ತಾರೆ. ವ್ಯಕ್ತಿಗಿಂತ ವಿಚಾರಗಳು ಮುಖ್ಯ, ವಿಚಾರಗಳನ್ನು ಭಿನ್ನ ಸಂದರ್ಭ ಮತ್ತು ಮಾನದಂಡಗಳಿಗೆ ಒಡ್ಡಿ ಅವುಗಳು ಸಮಕಾಲೀನ ಸಮಯಕ್ಕೆ ಯಾವ ಸಂದೇಶವನ್ನು ಕೊಡಬಹುದು ಎನ್ನುವುದನ್ನು ನಾವು ಗಮನಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಅವರ ವಿಚಾರಗಳು ಮತ್ತು ಅವರು ಬಳುವಳಿಯಾಗಿ ಬಿಟ್ಟುಹೋದದ್ದನ್ನು ನಿರ್ಮಮಕಾರವಾಗಿ ವಿಮರ್ಶೆಗೆ ಒಡ್ಡಬೇಕು.

ಅಂಬೇಡ್ಕರ್ ತೀರಿಕೊಂಡ ನಂತರ, ಅವರ ವಿಚಾರಗಳನ್ನು ಒಂದು ಆಂದೋಲನವಾಗಿ ಕಟ್ಟುವಲ್ಲಿ ಅವರ ಅನುಯಾಯಿಗಳು ವಿಫಲರಾದರೆಂದೇ ತೇಲ್ತುಂಬ್ಡೆ ಹೇಳುತ್ತಾರೆ. ಅವರ ಜೀವನ ಕಾಲದಲ್ಲಿಯೇ ಅಂಬೇಡ್ಕರ್ ಅವರ ಜೊತೆಗೆ ಅವರ ವಿಚಾರಗಳ ಬಗ್ಗೆ ಸಂವಾದ ನಡೆಸಿದ- ಅವರೊಂದಿಗೆ ವಾದಕ್ಕಿಳಿದ- ಅವರ ವಿಚಾರಗಳ ಬಗ್ಗೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದ ಅನುಯಾಯಿಗಳನ್ನು ನಾವು ಕಾಣುವುದಿಲ್ಲ. ಭಿನ್ನಾಭಿಪ್ರಾಯಗಳೇನಿದ್ದರೂ ಸವರ್ಣ ಸಮುದಾಯದಿಂದ ಬಂದಿತ್ತಷ್ಟೇ. ಅದರ ವಿರುದ್ಧವಾಗಿ ನಾವು ಗಾಂಧೀಜಿ, ನೆಹರೂ, ಪಟೇಲ್, ಸಾವರ್ಕರ್ ರೀತಿಯ ಚಿಂತಕರನ್ನು ನೋಡಿದಾಗ, ನಿರಂತರವಾಗಿ ಅವರ ಕಾಲದಲ್ಲೂ ಮತ್ತು ಅವರ ನಂತರವೂ ವಿರೋಧ, ಟೀಕೆ ಮತ್ತು ವಿಮರ್ಶೆಯನ್ನು ಕಂಡಿದ್ದೇವೆ. ಆದರೆ ದುರದೃಷ್ಟವಶಾತ್ ಅಂಬೇಡ್ಕರ್‌ಗೆ ದಕ್ಕಿದ್ದು ಅನುಯಾಯಿಗಳಾಗಲೀ, ಸಹಚರರಲ್ಲ. ಆ ಸಹಚರರಲ್ಲೂ ಯಾವುದೇ ರೀತಿಯ ಒಗ್ಗಟ್ಟು ಕಾಣದೇ ಜಾತಿ, ಉಪಜಾತಿಗಳ ಪ್ರತಿನಿಧಿಗಳಾಗಿ ಹರಿದು ಹಂಚಿಹೋಗಿದ್ದಾರೆ. ಹಾಗೆ ನೋಡಿದರೆ ಅಂಬೇಡ್ಕರ್ ಅವರ ನಂತರ ಬಹುಜನರ ರಾಜಕೀಯಕ್ಕೆ ಒಂದು ಐಕ್ಯತೆ ಕೊಡುವ ಪ್ರಯಾಸ ಮಾಡಿದ್ದು ಕಾನ್ಶಿರಾಮ್. ಅಲ್ಲಿಯೂ ಅವರ ಉತ್ತರಾಧಿಕಾರಿಯಾಗಿ ಗುರುತಿಸಿದ ಮಾಯಾವತಿಯವರನ್ನು ದಲಿತರ ಉಪಪಂಗಡವಾದ ಜಾತವರ ನಾಯಕಿಯಾಗಿಯೇ ಟಿಪ್ಪಣಿಕಾರರು ನೋಡುತ್ತಿದ್ದಾರೆ. ಯಾವುದನ್ನು ನಿರ್ಮೂಲನ ಮಾಡಬೇಕೆಂದು ಅಂಬೇಡ್ಕರ್ ಹೊರಟಿದ್ದರೋ, ಅದೇ ಅವರ ಅನುಯಾಯಿಗಳ ಪೀಡೆಯಾಗಿ ಉಳಿದಿದೆ. ಹೀಗೆ ಈ ಎಲ್ಲ ವಿಷಯಗಳನ್ನು ಪ್ರಾಮಾಣಿಕವಾಗಿ ಚರ್ಚಿಸುವ ಈ ಪುಸ್ತಕ ಆಪ್ತವಾಗಿಯೂ, ಓರ್ವ ವ್ಯಕ್ತಿಯ ವಿಚಾರಗಳೊಂದಿಗೆ ಸಂಭಾಷಣೆ ಕೈಗೊಳ್ಳುತ್ತಿರುವ ಅನುಭವವನ್ನು ಕೊಡುತ್ತದೆ.

ದೇವರ ಸ್ಥಾನದಲ್ಲಿರುವ ವ್ಯಕ್ತಿಯನ್ನು ಮಾನವರಂತೆ ಕಾಣುವುದು ಸರಳವಲ್ಲ. ಆದರೆ ತೇಲ್ತುಂಬ್ಡೆ ಅಬ್ಬರವಿಲ್ಲದೇ, ಶೌರಿಯವರಂತೆ ಪ್ರಚೋದನಾಕಾರಿಯಾಗಿ ಬರೆಯದೇ ಅದನ್ನು ಸಾಧಿಸುತ್ತಾರೆ.

●